2ನೇ ವರ್ಷ-3ನೇ ವರ್ಷದ ಇಂಜಿನೀಯರಿಂಗ್ ಹಗೂ ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ರೀತಿ ಬೋಗಸ್ ಅಂಕ ಪಟ್ಟಿಯ ಪ್ರಮಾಣ ಜಾಸ್ತಿಯಾಗುತ್ತಿದೆ: ಮಾತ್ರವಲ್ಲದೆ ಸರ್ಕಾರ ತನಿಖಾ ವರದಿಯನ್ನು ತೆಗೆದುಕೊಂಡ ನಂತರವೂ ಸಹ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಅಂತ ಹೇಳಿದರೆ ಇನ್ನು ಮುಂದೆ ಪಿ.ಯು.ಸಿ.ಯಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಂತಹ ವಿದ್ಯಾರ್ಥಿಗಳಿಗೆ ಆದಂತಹ ಅನಾನುಕೂಲಕ್ಕೆ ಯಾರು ಹೊಣೆಗಾರರು ಆಗುತ್ತಾರೆ? ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್: (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ನನ್ನ ಇಲಾಖೆಗೆ ಬರುವುದಿಲ್ಲ. ನನ್ನ ಸಹೋದ್ಯೋಗಿ ಶ್ರೀ ಗೋವಿಂದೆಗೌಡರ ಪರವಾಗಿ ಇಷ್ಟು ಆಶ್ವಾಸನೆ ಕೊಡುತ್ತೇನೆ. 2 ವರ್ಷ ಆದರೂ ವಿಚಾರಣೆಯಾಗಿಲ್ಲ ಅಂತ ಹೇಳುತ್ತಿದ್ದಾರೆ, ಶ್ರೀಗೋವಿಂದೆಗೌಡರಿಗೆ ಹೇಳಿ ವಿಚಾರಣ ವರದಿ ಬಂದಿದ್ದಾರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

(ಇ) ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿರುವುದು

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಬಾಗೇಪಲ್ಲಿ) ಸನ್ಮಾನ್ಯ ಸಭಾದ್ಯಕ್ಷರೆ, ಈ ದಿವಸ ಕೆಲವು ಸಂಘಟನೆಗಳವರು ಬೆಂಗಳೂರು ಬಂದ್‌ಗೆ ಕರೆಯನ್ನು ಕೊಟ್ಟಿದ್ದಾರೆ. ತಮಿಳುನಾಡಿಗೆ 5 ಟಿ.ಎಂ.ಸಿ ಕಾವೇರಿ ನೀರನ್ನು ಸರ್ಕಾರ ಬಿಟ್ಟದ್ದರ ವಿರುದ್ಧ ಪ್ರತಿಭಟನೆ ಮಾಡಲು ಬೆಂಗಳೂರು ಬಂದ್ಗೆ ಕೆರೆಯನ್ನು ಕೊಟ್ಟಿದೆ. ನಮಗೆ ಬೆಂಗಳೂರು ಬಂದ್ ಎಂದು ಹೇಳಿದರೆ, ಹಿಂದೆ ಇದೇ ಕಾವೇರಿ ನದಿಯ ನೀರಿನ ವಿಷಯವಾಗಿ ಬೆಂಗಳೂರಿಗೆ ಬಂದ್ ಕೊಟ್ಟಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ನಡೆದಂತಹ ಅಹಿತಕರ ಘಟನೆಗಳು ಮತ್ತು ಅದರಿಂದ ಆದಂತಹ ದುಷ್ಪರಿಣಾಮಗಳು, ಭಾಷೆ ಅಲ್ಪಸಂಖ್ಯಾತರ ಮೇಲೆ ನಡೆದಂತಹ ದಬ್ಬಾಳಿಗಳು ನಮ್ಮ ಮುಂದೆ ಸಾಕ್ಷಿಯಾಗಿ ನಿಂತಿದೆ. ಇವತ್ತು ಕೂಡ ಇದೇ ವಿಷಯದ ಬಗ್ಗೆ ಬಂದ್‌ನ್ನು ಕರೆದಿರತಕ್ಕಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಬಂದ್‌ನ ಪರಿಸ್ಥಿತಿ ಏನಾಗಿದೆ? ಅಥವಾ ಬಂದ್ ಎಂದು ಹೇಳಿದರೆ ಕೆಲವರು ಟಾರ್ಗೆಟ್ ಮಾಡಿಕೊಂಡಿರುತ್ತಾರೆ, ಬಂದ್ ಸಂದರ್ಭದಲ್ಲಿ ಅವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ. ಆದ್ದರಿಂದ ಆ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಮತ್ತು ಬಂದ್ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಏನೇನು ಕ್ರಮ ತೆಗೆದುಕೊಂಡಿದ್ದಾರೆಂದು ದಯಮಾಡಿ ಸದನಕ್ಕೆ ವಿವರವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಗೃಹ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾಗಿರತಕ್ಕಂತಹ ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಬೆಂಗಳೂರು ಬಂದ್ಗೆ ಕೆಲವರು ಕೊಟ್ಟಿರತಕ್ಕಂತಹ ಕರೆಗೆ ಇದುವರೆಗೂ ಸಹಿತ ಯಾವುದೇ ಸಹಕಾರ ಸಿಕ್ಕಿಲ್ಲ, ಸಾರ್ವಜನಿಕ ಜೀವನ ಯಾವುದೇ ರೀತಿಯ ಅಡಚಣೆ ಇಲ್ಲದೆ ನಡೆಯುತ್ತಿದೆ. ಬಿ.ಟಿ.ಎಸ್. ಬಸ್ಸಗಳು ಓಡಾಡುತ್ತಿವೆ. ಕಛೇರಿಗಳಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಬಸ್ಸಗಿಗೆ ಯಾವುದೋ ಒಂದು ಕಡೆ ಮಾತ್ರ ಬೆಳಗಿನ ಜಾವ ಐದೂವರೆ ಗಂಟೆಯಲ್ಲಿ ಯಾರೋ ನಾಲ್ಕು ಐದು ಜನ ಹುಡುಗರು ಕಲ್ಲನ್ನು ಹೊಡೆದರಂತೆ. ಇದನ್ನು ಬಿಟ್ಟರೆ...

ಅಧ್ಯಕ್ಷರು : ಕಳೆದ ಸಾರಿ ನಡೆದಿದ್ದರಿಂದ ಈ ಸಾರಿ ವಿಶೇಷವಾಗಿ ಏನು ಎಚ್ಚರಿಕೆಯನ್ನು ತೆಗೆದುಕೊಂಡಿದ್ದೀರಿ ಅದನ್ನು ಮಾತ್ರ ಹೇಳಿಬಿಡಿ. ವಿವರವಾಗಿ ಏನು ಬೇಡ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಷ್ಟೇ ಇನ್ನೇನೂ ಇಲ್ಲ.

(ಈ) ಮೈಸೂರು ಜಿಲ್ಲೆಗಳ 3 ಜನ ಶಾಸಕರುಗಳಿಗೆ ಆಗಸ್ಟ್ 15ರಂದು ತೋರಿದ ಮಲತಾಯಿ ಧೋರಣೆ.

ಶ್ರೀ ಶಂಕರ್ ಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾವು ಈ ಸ್ವತಂತ್ರ ಭಾರತದ ಪ್ರತಿನಿಧಿಗಳೋ ಅಲ್ಲವೋ ಅನ್ನತಕ್ಕಂತಹ ಪ್ರಶ್ನೆಯನ್ನು ಈ ಸದನದಲ್ಲಿ ಹೇಳಬೇಕಾದುದು ಅನಿವಾರ್ಯವಾಗುತ್ತದೆ. ಕಾರಣವಾದರೂ ಇಷ್ಟೇ; ನಮ್ಮ ಜನತಾ ದಳದ ಸರ್ಕಾರ ಸ್ವಾಭಿಮಾನ, ಸದೃಢ, ಎಲ್ಲ ವರ್ಗದ ಜನರ ಹಿತವನ್ನು ಕಾಪಾಡುತ್ತದೆ ಎಂದು ಘೋಷಣೆಗಳ ಮುಖಾಂತರ ಈ ರಾಜ್ಯದ ಆಡಳಿತದ ಚುಕ್ಕಾಣಿಯನ್ನು ಹಿಡಿದರು. ಆದರೆ ನಮ್ಮ ಮೈಸೂರು ಜಿಲ್ಲೆಯಲ್ಲಿ ನಮ್ಮ ಉಸ್ತುವಾರಿ ಮಂತ್ರಿಗಳು ನಮಗೆ ಉಸಿರು ಕಟ್ಟುವಂತಹ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ಪ್ರಬುದ್ಧ ಮತ್ತು ಪ್ರಜ್ಞಾವಂತ ಮತದಾರರಿಂದ ಆಯ್ಕೆಯಾಗಿ, ಎಲ್ಲಾ ವರ್ಗದ ಜನರನ್ನು ಓಲೈಸುವ ದಿಕ್ಕಿನಲ್ಲಿ ಕೆಲಸ ಮಾಡಿಕೊಂಡು ಹೋಗುತ್ತಿದ್ದರೂ ಕೂಡ, ಕುವೆಂಪುರವರು ಒಂದು ಮಾತನ್ನು ಹೇಳುತ್ತಾರೆ. "ಜಾತಿ ಮತಗಳ ಹೊಟ್ಟೆ ತೂರಿ ಎಲ್ಲ ತತ್ವಗಳ ಎಲ್ಲೆ ಮೀರಿ, ದಿಗ್ ದಿಗಂತದ ದತ್ತ ಏರಿ" ಕವಿಪುರವರ ವ್ಯಾಖ್ಯಾನವನ್ನು ಸೂಚಿಸಿಕೊಂಡು ಹೋಗತಕ್ಕಂತಹ ನಾವು, ನಮ್ಮನ್ನು 15ನೇ ಆಗಸ್ಟರಂದು ನಡೆದಂತಹ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೂರು ಶಾಸಕರಿಗೂ ಕೂಡ ಮಲತಾಯಿ ಧೋರಣೆಯನ್ನು ತೋರುವುದರ ಮೂಲಕ, ನಮ್ಮನ್ನು ಗುರುತಿಸದೇ ನಮ್ಮನ್ನು ಕರೆಯದೇ ಇರತಕ್ಕಂಥದ್ದು ಪ್ರಜಾಪ್ರಭುತ್ವದ ಕಗ್ಗೊಲೆ ಎನ್ನತಕ್ಕಂತಹ ಮಾತನ್ನು ಕೂಡ ಸಿಟ್ಟಾಗಿ ಹೇಳಬೇಕಾಗುತ್ತದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, ಮಂಡ್ಯದಲ್ಲಿ ಬಡವರಿಗೆ ಸೇವೆ ಸಲ್ಲಿಸದ ರಾಜಕಾರಣಿ, ಅಧಿಕಾರಿಯನ್ನು ಒದ್ದು ಹೊರಗಡೆ ಹಾಕಿ ಎನ್ನತಕ್ಕಂತಹ ಮಾತನಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜಾ ಪ್ರತಿನಿಧಿಗಳಿಗೆ ಇರಬೇಕಾಗಿರತಕ್ಕಂತಹ ಹಕ್ಕನ್ನು ಇವರು ಖಂಡಿತವಾಗಿಯೂ ಕೊಟ್ಟಿಲ್ಲ. ನಮ್ಮ ಜನತಾ ದಳದವರು ತಮ್ಮ ಮೌಲ್ಯವನ್ನು ಕಳೆದುಕೊಂಡಿದ್ದಾರೆ ಅನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. 224 ಜನರು ಗೆದ್ದ ಮೇಲೆ ಎಲ್ಲಾ ವರ್ಗದವರು ಜನತೆಯ ಪ್ರತಿನಿಧಿಗಳ ಎಂದು ತಿಳಿದುಕೊಳ್ಳಬೇಕು, ಎಲ್ಲರಿಗೂ ಕೂಡ ಸಮಾನತೆ ಸಿಗಬೇಕೆಂದು ಸ್ಪಷ್ಟವಾಗಿ ನಾನು ಹೇಳಬಯಸುತ್ತೇನೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದಂತಹ ಉತ್ತರವನ್ನು ಕೊಡಲಿ, ಇದಕ್ಕೆ ಅಧಿಕಾರಿಗಳು ಶಾಮೀಲಾಗಿದ್ದಾರೆಯೋ ಅಥವಾ ನಮ್ಮ ಉಸ್ತುವಾರಿ ಮಂತ್ರಿಗಳ ಕೈವಾಡವೋ ಏನು ಎಂಬುದು ನಮಗೆ ಶಂಕೆ ಮೂಡಿದೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಜಿಲ್ಲಾ ಮಂತ್ರಿಗಳು ಸ್ವಾತಂತ್ರ್ಯ ದಿನಾಚರಣೆಯ ದಿನ ಬಾವುಟವನ್ನು ಹಾರಿಸುವಂಥದ್ದು ಸರ್ಕಾರದ ಆದೇಶವೇ ಇದೆ. ತಮಗೆ ಏನಾಯಿತು ನನಗೆ ಅರ್ಥವಾಗಲಿಲ್ಲ, ಅವರು ಹೇಳಿದ್ದು ಸಹ ನನಗೆ ಅರ್ಥವಾಗಲಿಲ್ಲ. ಬಾವುಟವನ್ನು ಹಾರಿಸುವಂಥದ್ದನ್ನು ಜಿಲ್ಲಾ ಮಂತ್ರಿಗಳು ಮಾಡುತ್ತಾರೆ. ಸಂಬಂಧಪಟ್ಟಂತಹ ಡಿವಿಜನ್ ಕಮಿಷನ್ ಎಲ್ಲಾರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸುತ್ತಾರೆ. ಈಗ ಏನು ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಾಗಲಿಲ್ಲ.

ಅಧ್ಯಕ್ಷರು : ಇವರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲೆಯ ಯಾವ ಶಾಸಕರ ಹೆಸರನ್ನು ಮುದ್ರಣ ಮಾಡಿಲ್ಲ, ಇವರಿಗೆ ಯಾವುದೇ ರೀತಿಯ ಮನ್ನಣೆಯನ್ನು ಕೊಡಲಿಲ್ಲ.